ಸಾಕ್ಷಿಯನ್ನು ದಿಃ **18.06.2026** ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು ಪಿಡಬ್ಲ್ಯೂ– **1**

**ಪಾಟೀ ಸವಾಲು: ಎದುರುದಾರರ ಪರ ವಕೀಲರಿಂದ:–**

**1.** ನನ್ನ ಅರ್ಜಿಯಲ್ಲಿ ಕಾಣಿಸಿರುವ ವಿಳಾಸಕ್ಕೆ ಸಂಬಂಧಪಟ್ಟಂತೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವ ಬಗ್ಗೆ ನೆನಪಿಲ್ಲ. ಮಿಸ್ ನಂ. 04/2012 ರ ಅರ್ಜಿಯು ಯಾವ ದಿನಾಂಕದಂದು ವಜಾಗೊಂಡಿದೆ ಎಂದು ನನಗೆ ಗೊತ್ತಿಲ್ಲ. ಸದರಿ ಪ್ರಕರಣ ಯಾವ ಕಾರಣಕ್ಕಾಗಿ ವಜಾಗೊಂಡಿದೆ ಎಂದು ನನಗೆ ಗೊತ್ತಿಲ್ಲ. ಮಿಸ್.ನಂ.04/2012 ರ ಅರ್ಜಿಯನ್ನು ಜಮೀನಿನ ವಿಚಾರಕ್ಕೆ ಸಂಬಂಧಿಸಿ ಸಲ್ಲಿಸಿರುತ್ತೇನೆ. ಸದರಿ ಪ್ರಕರಣದಲ್ಲಿ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ. ಸದರಿ ಪ್ರಕರಣದಲ್ಲಿ ಯಾವ ಕಾರಣಕ್ಕಾಗಿ ನಾನು ಯಾವಾಗ ಗೈರು ಹಾಜರಿದ್ದೆ ಎಂದು ಪ್ರಸ್ತುತ ಅರ್ಜಿಯಲ್ಲಿ ಕಾಣಿಸಿರುವ ಬಗ್ಗೆ ನನಗೆ ನೆನಪಿಲ್ಲ.

**2.** ಸಾಮಾನ್ಯವಾಗಿ ಜಾಂಡೀಸ್ ಖಾಯಿಲೆ ಒಂದು ತಿಂಗಳಿನವರೆಗೆ ಇರುತ್ತದೆ. ನನಗೆ ಚಿಕಿತ್ಸೆ ನೀಡಿದ ವೈದ್ಯರ ಹೆಸರು ನೆನಪಿಲ್ಲ. ನನ್ನ ಮಗಳು ನನ್ನ ಹಾಗೂ ಎದುರುದಾರರ ವಿರುದ್ಧ ಅಸಲು ದಾವಾ ಸಂಃ 49/2017 ರಲ್ಲಿ ಇದೇ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿದ್ದರು ಎಂದರೆ ಸರಿ. ಸದರಿ ದಾವೆಯ ವಾದಪತ್ರದ ಧೃಡೀಕೃತ ಪ್ರತಿಯನ್ನು ಈಗ ನೋಡುತ್ತಿದ್ದೇನೆ. ಅದನ್ನು ಸಾಕ್ಷಿ ನೋಡಿ ಒಪ್ಪಿದ್ದರಿಂದ ಅದನ್ನು ನಿಆರ್.01 ಎಂದು ಗುರುತಿಸಲಾಯಿತು. ಸದರಿ ದಾವೆಯಲ್ಲಿ ನಾನು ಆಗಾಗ ಹಾಜರಾಗಿದ್ದೇನೆ. ಸದರಿ ದಾವೆಯ ಬಗ್ಗೆ ಸಮನ್ಸ್ ಬಂದ ನಂತರ ನನಗೆ ಗೊತ್ತಾಯಿತು. ಯಾವ ಆಸ್ತಿಯ ಮೇಲೆ ಸದರಿ ದಾವೆ ಸಲ್ಲಿಸಲಾಗಿತ್ತು ಎಂದು ನನಗೆ ಗೊತ್ತಿಲ್ಲ. ಸದರಿ ದಾವೆಯು ಪುರಸ್ಕತವಾಗಿರುತ್ತದೆ ಎಂದರೆ ಸರಿ. ಸದರಿ ಆದೇಶ ಹಾಗೂ ಡಿಕ್ರಿಯ ಧೃಡೀಕೃತ ಪ್ರತಿಯನ್ನು ಈಗ ನೋಡುತ್ತಿದ್ದೇನೆ. ಅದನ್ನು ಸಾಕ್ಷಿ ನೋಡಿ ಒಪ್ಪಿದ್ದರಿಂದ ಅದನ್ನು ನಿಆರ್.02 ಎಂದು ಗುರುತಿಸಲಾಯಿತು.

**3.** ಅಸಲು ದಾವೆ ಸಂಃ 243/2010 ರ ದಾವೆಯು ದಿಃ 10.02.2011 ರಂದು ಡಿಕ್ರಿಯಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಅದಕ್ಕೆ ಸಂಬಂಧಪಟ್ಟ ಜಾರಿ ಅರ್ಜಿ ಸಂಃ 69/2011 ಇದೇ ನ್ಯಾಯಾಲಯದಲ್ಲಿ ಸಲ್ಲಿಸಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಈಗ ನಾನು ನೋಡುತ್ತಿರುವ

ದಾಖಲೆಗಳು ನನ್ನ ಹೆಂಡತಿ ಮತ್ತು ನಾನು ನನ್ನ ಮಗಳಿಗೆ ಬರೆದುಕೊಟ್ಟಿರುವ ದಾನಪತ್ರಗಳಾಗಿರುತ್ತವೆ ಎಂದರೆ ಸರಿ. ನನ್ನ ಹೆಂಡತಿ ಬರೆದುಕೊಟ್ಟಿರುವ ಪತ್ರಕ್ಕೆ ನಾನು ಸಾಕ್ಷಿಯಾಗಿ ಸಹಿ ಮಾಡಿರುತ್ತೇನೆಂದರೆ ಸರಿ. ಸದರಿ ಪತ್ರಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಅವುಗಳನ್ನು ನಿಆರ್.03 ಮತ್ತು 04 ಎಂದು ಗುರುತಿಸಲಾಯಿತು. ಈಗ ನಾನು ನೋಡುತ್ತಿರುವ ದಾಖಲೆಯು ನನ್ನ ಆಧಾರ್ ಕಾರ್ಡ್ ಹಾಗೂ ಪ್ರಮಾಣ ಪತ್ರ ಎಂದರೆ ಸರಿ. ಸದರಿ ಆಧಾರ್ ಕಾರ್ಡ್ ಹಾಗೂ ಪ್ರಮಾಣ ಪತ್ರದ ಧೃಡೀಕೃತ ಪ್ರತಿಗಳನ್ನು ನಿಆರ್.5 ಮತ್ತು 6 ಎಂದು ಗುರುತಿಸಲಾಯಿತು.

4. ಈಗ ನಾನು ನೋಡುತ್ತಿರುವ ದಾಖಲೆಯು ಅಸಲು ದಾವಾ ಸಂಃ 243/2010 ರ ಆದೇಶ ಹಾಗೂ ಡಿಕ್ರಿಯ ಧೃಡೀಕೃತ ಪ್ರತಿ ಎಂದರೆ ಸರಿ. ಸದರಿ ಆದೇಶ ಮತ್ತು ಡಿಕ್ರಿಯ ಧೃಡೀಕೃತ ಪ್ರತಿಯನ್ನು ನಿಆರ್.7 ಎಂದು ಗುರುತಿಸಲಾಯಿತು. ಈಗ ನಾನು ನೋಡುತ್ತಿರುವ ದಾಖಲೆಯು ಅಮಲ್ಜಾರಿ ಸಂಃ 69/2011 ರ ಅರ್ಜಿ ಹಾಗೂ ಆದೇಶದ ಪುಟದ ಧೃಡೀಕೃತ ಪ್ರತಿಗಳು ಎಂದರೆ ಸರಿ. ಸದರಿ ಅರ್ಜಿ ಹಾಗೂ ಆದೇಶದ ಪುಟದ ಧೃಡೀಕೃತ ಪ್ರತಿಯನ್ನು ನಿಆರ್.8 ಮತ್ತು 9 ಎಂದು ಗುರುತಿಸಲಾಯಿತು. ಸದರಿ ಅಮಲ್ಜಾರಿ ಪ್ರಕರಣದಲ್ಲಿ ನಾನು ವಕೀಲರ ಮೂಲಕ ಹಾಜರಾಗಿದ್ದೆ ಎಂದರೆ ಸರಿ. ಸದರಿ ಅಮಲ್ಜಾರಿ ಪ್ರಕರಣದಲ್ಲಿ ನ್ಯಾಯಾಲಯದ ಮೂಲಕ ಎದುರುದಾರರ ಪರವಾಗಿ ದಿಃ 29.12.2014 ರಂದು ನೋಂದಾಯಿತ ಕ್ರಯಪತ್ರ ಮಾಡಲಾಗಿದೆ ಎಂದರೆ ನನಗೆ ಗೊತ್ತಿಲ್ಲ.

5. ಸದರಿ ಕ್ರಯಪತ್ರವಾದ ನಂತರ ದಾವಾ ಆಸ್ತಿಯ ಸ್ವಾಧೀನವನ್ನು ಬೇಲೀಫ್ ಮೂಲಕ ಎದುರುದಾರರು ಕೊಟ್ಟಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಅದರ ನಂತರ ಮೇಲೆ ಹೇಳಿದ ಅಮಲ್ಜಾರಿ ಪ್ರಕರಣ ಮುಕ್ತಾಯಗೊಂಡಿದೆ ಎಂದರೆ ನನಗೆ ಗೊತ್ತಿಲ್ಲ. ನಿಆರ್.3 ರಿಂದ 5 ರಲ್ಲಿ ಕಾಣಿಸಿರುವ ನನ್ನ ವಿಳಾಸ ಸರಿಯಾಗಿದೆ ಎಂದರೆ ಸರಿ. ಸದರಿ ವಿಳಾಸವನ್ನೇ ಅಸಲು ದಾವೆ ಸಂಃ 49/2017, ಅಸಲು ದಾವೆ ಸಂಃ 243/2010 ಹಾಗೂ ಅಮಲ್ಜಾರಿ ಸಂಃ 69/2011 ರಲ್ಲಿ ಕಾಣಿಸಲಾಗಿದೆ ಎಂದರೆ ಸರಿ.

6. ಅಮಲ್ಜಾರಿ ಸಂಃ 69/2011 ಮುಕ್ತಾಯಗೊಂಡ ಬಗ್ಗೆ ಪ್ರಸ್ತುತ ಅರ್ಜಿಯಲ್ಲಿ ಹಾಗೂ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ತಿಳಿಸಿಲ್ಲ. ಮಿಸ್ ನಂ.4/2012 ದಿಃ 26.10.2013 ರಂದು ನಾನು ಹಾಜರಾಗದೇ ಇದ್ದುದ್ದರಿಂದ ವಜಾಗೊಂಡಿದೆ ಎಂದರೆ ನನಗೆ ಗೊತ್ತಿಲ್ಲ. ದಿಃ 22.02.2013, ದಿಃ 16.04.2013, ದಿಃ 03.08.2013, ದಿಃ 23.08.2013, ದಿಃ 12.09.2013 ಹಾಗೂ 26.10.2013 ರಂದು ನಾನು ಯಾವ ಕಾರಣಕ್ಕಾಗಿ ಹಾಜರಾಗಿಲ್ಲ ಎಂದು ಪ್ರಸ್ತುತ ಅರ್ಜಿಯಲ್ಲಿ ತೋರಿಸಿಲ್ಲ ಎಂದರೆ ಸರಿಯಲ್ಲ. ದಿಃ 26.10.2013 ರಿಂದ ದಿಃ 18.02.2015 ರವರೆಗೆ ಎಷ್ಟು ದಿನ ವಿಳಂಬವಾಗಿದೆ ಎಂದು ನಾನು ತಿಳಿದುಕೊಂಡಿಲ್ಲ. ಸದರಿ ವಿಳಂಬಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ವಕೀಲರಿಗೆ ಕೊಟ್ಟಿದ್ದೇನೆಂದು ನುಡಿಯುತ್ತಾರೆ. ವಕೀಲರು ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವ ಬಗ್ಗೆ ನನಗೆ ಗೊತ್ತಿಲ್ಲ.

7. ಈಗಾಗಲೇ ಅಮಲ್ಜಾರಿ ಸಂಃ 69/2011 ರಲ್ಲಿ ಎದುರುದಾರರ ಪರವಾಗಿ ಕ್ರಯಪತ್ರ ಬರೆದು ಅವರಿಗೆ ಸ್ವಾಧೀನ ಕೊಟ್ಟಿರುವುದರಿಂದ ಪ್ರಸ್ತುತ ಅರ್ಜಿ ಊರ್ಜಿತವಲ್ಲ ಎಂದರೆ ಸರಿಯಲ್ಲ. ಸದರಿ ಅಮಲ್ಜಾರಿ ಪ್ರಕರಣ ದಿಃ 14.08.2015 ರಂದು ಮುಕ್ತಾಯಗೊಂಡಿದ್ದರೂ ಉದ್ದೇಶಪೂರ್ವಕವಾಗಿ ಈ ವಿಚಾರವನ್ನು ಪ್ರಸ್ತುತ ಅರ್ಜಿಯಲ್ಲಿ ತಿಳಿಸಿಲ್ಲ ಎಂದರೆ ಸರಿಯಲ್ಲ. ಸದರಿ ಅಮಲ್ಜಾರಿ ಪ್ರಕರಣದ ನಂತರ ದಾವಾ ಆಸ್ತಿಯ ಪಹಣಿ ಪತ್ರಿಕೆ ಎದುರುದಾರರ ಹೆಸರಿಗೆ ಬಂದಿದೆ ಎಂದರೆ ಸರಿ. ಅದರ ನಂತರ ನನ್ನ ಮಗಳ ಮೂಲಕ ಅಸಲು ದಾವೆ ಸಂಃ 49/2017 ದಾವೆ ಸಲ್ಲಿಸಿದ್ದೆ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ನಾನು ನಿರಂತರವಾಗಿ ಹಾಜರಾಗುತ್ತಿದ್ದೆ ಎಂದರೆ ಸರಿಯಲ್ಲ. ಈ ವಿಚಾರವು ಸದರಿ ದಾವೆಯ ಆದೇಶದಲ್ಲಿ ಕಾಣಿಸಲಾಗಿದೆ ಎಂದರೆ ನನಗೆ ಗೊತ್ತಿಲ್ಲ.

8. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಸದರಿ ಪ್ರಮಾಣ ಪತ್ರವನ್ನು ತಯಾರಿಸಲು ಯಾರು ಮಾಹಿತಿ ಕೊಟ್ಟಿದ್ದಾರೆಂದು ನನಗೆ ಗೊತ್ತಿಲ್ಲ. ನನಗೆ ಯಾವಾಗ ಖಾಯಿಲೆಯಾಗಿತ್ತು ಹಾಗೂ ನಾನು ಎಷ್ಟು ದಿನ ಚಿಕಿತ್ಸೆ ಪಡೆದಿದ್ದೇನೆಂದು ಈ ಅರ್ಜಿಯಲ್ಲಿ ತಿಳಿಸಿಲ್ಲ ಎಂದರೆ ಸರಿ. ನನಗೆ ಚಿಕಿತ್ಸೆ ಕೊಟ್ಟ ವೈದ್ಯರನ್ನು ವಿಚಾರಣೆ ಮಾಡಿಸಲು ಆಗುವುದಿಲ್ಲ. ನಾನು 15 – 20 ವರ್ಷಗಳ ಹಿಂದೆ ಬನ್ನೂರಿನಲ್ಲಿರುವ ನಾಗರಾಜು ಎನ್ನುವವರ ಮನೆಯಲ್ಲಿ ಚಿಕಿತ್ಸೆ ಪಡೆದಿದ್ದೇನೆ.

ನನಗೆ ಯಾವುದೇ ಖಾಯಿಲೆಯಾಗದಿದ್ದರೂ ಅರ್ಜಿ ಸಲ್ಲಿಸುವ ಸಲುವಾಗಿ ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಆದ್ದರಿಂದ ನಾನು ಯಾವುದೇ ಚಿಕಿತ್ಸೆ ಪಡೆದಿಲ್ಲ ಹಾಗೂ ಅದಕ್ಕೆ ಸಂಬಂಧಪಟ್ಟ ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ನನಗೆ ಯಾವುದೇ ಖಾಯಿಲೆ ಆಗದೇ ಇದ್ದುದ್ದರಿಂದ ದಿನಾಂಕವನ್ನು ನನ್ನ ಅರ್ಜಿ ಹಾಗೂ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ತಿಳಿಸಿಲ್ಲ ಎಂದರೆ ಸರಿಯಲ್ಲ. ಎಷ್ಟು ದಿನ ವಿಳಂಬವನ್ನು ಮನ್ನಾ ಮಾಡಲು ಅರ್ಜಿ ಸಲ್ಲಿಸಿದ್ದೇನೆಂದು ನನಗೆ ಗೊತ್ತಿಲ್ಲ.

9. ಈಗಾಗಲೇ ಅಸಲು ದಾವಾ ಸಂಃ 243/2010, ಅಮಲ್ಜಾರಿ ಸಂಃ 69/2011 ರ ಪ್ರಕರಣಗಳು ಮುಕ್ತಾಯಗೊಂಡಿದ್ದರಿಂದ ಮಿಸ್ ನಂ.04/2012 ನ್ನು ಮತ್ತೆ ವಿಚಾರಣೆ ಮಾಡುವ ಪ್ರಶ್ನೆ ಬರುವುದಿಲ್ಲ ಎಂದರೆ ಸರಿಯಲ್ಲ. ಆದರೂ ಎದುರುದಾರರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಆದ್ದರಿಂದ ನಾನು ಎಲ್ಲಾ ಪ್ರಕರಣಗಳ ಬಗ್ಗೆ ಮರೆ ಮಾಚಿ ಸುಳ್ಳು ಅರ್ಜಿ ಸಲ್ಲಿಸಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ನನ್ನ ಉಕ್ತಲೇಖನದ ಮೂಲಕ ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.

ಪ್ರಧಾನ ಸಿ.ಜೆ. ಮತ್ತು ಜೆ.ಎಂಎಫ್.ಸಿ

ಮಳವಳ್ಳಿ